# ಬಿಜೆಪಿ–ಕರ್ನಾಟಕ
# **ರಾಜ್ಯ ಕಾರ್ಯಕಾರಿಣಿ ಸಭೆ**
**7 ಅಕ್ಟೋಬರ್ 2022, ಶುಕ್ರವಾರ | ತ್ರಿಪುರ ವಾಸಿನಿ, ಬೆಂಗಳೂರು**

## ನಿರ್ಣಯ – 1

## ದೇಶವಿರೋಧಿ ಮತೀಯ ಸಂಘಟನೆಗಳ ನಿಷೇಧ: ಸಶಕ್ತ ಭಾರತದ ನಿರ್ಮಾಣದತ್ತ ಮತ್ತೊಂದು ಸಧೃಡ ಹೆಜ್ಜೆ : ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳು

ಐಸಿಸ್ ನಂತರ ಅಂತರರಾಷ್ಟ್ರೀಯ ಉಗ್ರ ಸಂಘಟನೆಗಳ ಜತೆ ನಂಟು, ಹಿಂದೂ ಕಾರ್ಯಕರ್ತರ ಹತ್ಯೆ, ಕೋಮುಗಲಭೆಗೆ ಕುಮ್ಮಕ್ಕು, ಕರ್ನಾಟಕದಲ್ಲಿ ಹಿಜಾಬ್ ಹೋರಾಟ ರೂಪಿಸಿದ ಪಿಎಫ್ಐ ಮತ್ತು ಇನ್ನಿತರ **ದೇಶವಿರೋಧಿ ಸಂಘಟನೆಗಳಿಗೆ** 5 ವರ್ಷಗಳ ಕಾಲ ದೇಶಾದ್ಯಂತ ನಿಷೇಧಿಸಿ ದಿಟ್ಟ ನಿರ್ಧಾರ ಕೈಗೊಂಡ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಅಭಿನಂದನೆಗಳು.

ಕರ್ನಾಟಕದಲ್ಲಿ ಪಿಎಫ್ಐ ಮೇಲೆ 320 ಕ್ಕೂ ಹೆಚ್ಚು ಪ್ರಕರಣಗಳು. ಮೂರು ಕೊಲೆಯತ್ನ ಹಲವು ದೊಂಬಿ ಪ್ರಕರಣಗಳು ದಾಖಲಾಗಿವೆ. ಕೇಂದ್ರ ಗೃಹ ಸಚಿವಾಲಯವು ಪಿಎಫ್ಐ ನಿಷೇದಿಸಿ ಹೊರಡಿಸಿರುವ ಅಧಿಸೂಚನೆಯಲ್ಲಿ 4 ಹಿಂದೂ ಕಾರ್ಯಕರ್ತರ ಕೊಲೆ ಪ್ರಕರಣಗಳನ್ನು ಉಲ್ಲೇಖಿಸಿದೆ. 2006ರಲ್ಲಿ ನಡೆದ ಬೆಂಗಳೂರಿನ ಆರ್.ರುದ್ರೇಶ್ (ಶಿವಾಜಿನಗರ), ಮತ್ತು ಉಡುಪಿ ಜಿಲ್ಲೆಯ ಪ್ರವೀಣ್‌ಪೂಜಾರಿ, 2017ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶರತ್ ಮಡಿವಾಳ್, 2022ರಲ್ಲಿ ಸೂಳ್ಯದ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣಗಳನ್ನು ಕೇಂದ್ರ ಗೃಹ ಸಚಿವಾಲಯ ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಈ 4 ಕೊಲೆ ಪ್ರಕರಣಗಳಲ್ಲಿ ಪಿಎಫ್ಐ ಕಾರ್ಯಕರ್ತರು ಭಾಗಿಯಾಗಿರುವುದು ಸ್ಪಷ್ಟವಾಗಿದೆ.

2020 ದಿನಾಂಕ 11 ಮತ್ತು 12ರ ರಾತ್ರಿ ನಡೆದ ಡಿ.ಜೆ.ಹಳ್ಳಿ & ಕೆ.ಜಿ ಹಳ್ಳಿ ಗಲಭೆ ಪ್ರಕರಣದಲ್ಲಿ ಪಿಎಫ್ಐ ಸಂಘಟನೆಯ ಕೈವಾಡವಿರುವುದು ಕಂಡು ಬಂದು ಹೆಚ್ಚಿನ ತನಿಖೆಗಾಗಿ ರಾಜ್ಯ ಬಿಜೆಪಿ ಸರ್ಕಾರವು ಈ ಪ್ರಕರಣವನ್ನು ಎನ್ಐಎಗೆ ವಹಿಸಿತ್ತು. ಅದರ ಬೆನ್ನಲ್ಲೆ ಪಿಎಫ್ಐ ಸೇರಿ 9 ಸಂಘಟನೆಗಳನ್ನು ನಿಷೇಧಿಸಿದೆ. ಸೀಮಿ (SIMI) 16 ವರ್ಷಗಳ ಹಿಂದೆ ತಲೆ ಎತ್ತಿದ ಮೂಲಭೂತವಾದಿ ಸಂಘಟನೆಯ ಕಾರ್ಯ ಚಟುವಟಿಕೆಗಳು ಸ್ಥಗಿತಗೊಂಡಿದೆ. 2012ರಲ್ಲಿ ಕೇರಳದ ಉಮಾನ್‌ಚಾಂಡಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೇರಳ ರಾಜ್ಯದಲ್ಲಿ "ಪಿಎಫ್ಐ" ಸಂಘಟನೆಗೆ ಬಯೋತ್ಪಾಧಕರ ಜೊತೆ ಸಂಬಂಧವಿದೆ ಎಂದು ಕೇಂದ್ರ ಸರ್ಕಾರಕ್ಕೆ ದೂರನ್ನು ನೀಡಿದ್ದರು. 2014ರಲ್ಲಿ ಕೇರಳದ ಎಡಪಂತೀಯ ಸರ್ಕಾರ ಕೇರಳ ಹೈ–ಕೋರ್ಟ್‌ನಲ್ಲಿ "ಪಿಎಫ್ಐ" ಸಂಘಟನೆಗೆ ಉಗ್ರವಾದಿಗಳ ಜೊತೆ ಸಂಬಂಧವಿದೆ ಎಂದು ಅಫಿಡವೇಟ್‌ಅನ್ನು ಸಲ್ಲಿಸಿರುತ್ತಾರೆ. ದುರ್ದೈವವೆಂದರೆ ಎಡಪಂಥೀಯ ಸೀತಾರಾಮ್ ಯೆಚೂರಿಯವರು ಮತ್ತು ಕಾಂಗ್ರೆಸ್ಸಿನ ವಕ್ತಾರರು "ಪಿಎಫ್ಐ" ಸಂಘಟನೆ ಉಗ್ರವಾದಿ ಸಂಘಟನೆ ಎನ್ನುವುದಕ್ಕೆ ಸಾಕ್ಷಿಯನ್ನು ಕೇಳುತ್ತಾರೆ. ಆದರೆ ಇಂದಿನ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಉತ್ತರ ಪ್ರದೇಶ, ಕರ್ನಾಟಕ, ಗುಜರಾತ್ ಕೇರಳದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷವಾದ ಇಂಡಿಯನ್ ಯ್ಯೂನಿಯನ್ ಮುಸ್ಲಿಂ ಲೀಗ್ (IUML) ಸ್ವಾಗತಮಾಡಿವೆ. ಆದರೆ ದುರ್ದೈವವೆಂದರೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ವಿರೋಧ ಪಕ್ಷದ ನಾಯಕ ಶ್ರೀ ಸಿದ್ದರಾಮಯ್ಯರವರು ಕೊಲೆಪಾತಕ ಪಿಎಫ್ಐ ಕಾರ್ಯಕರ್ತರ ಮೇಲಿದ್ದ ಪ್ರಕರಣಗಳನ್ನು ಹಿಂಪಡೆದು ದೇಶದಲ್ಲಿ ಆರ್.ಎಸ್.ಎಸ್ನ್ನು ಕೂಡ ಬ್ಯಾನ್ ಮಾಡಬೇಕೆಂದು ಬೇಜವಾಬ್ದಾರಿ ಹೇಳಿಕೆಯನ್ನು ನೀಡುತ್ತಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಈ ಹೇಳಿಕೆಯನ್ನು ಭಾರತೀಯ ಜನತಾ ಪಾರ್ಟಿ ಬಲವಾಗಿ ಖಂಡಿಸುತ್ತದೆ.

**ದೇಶವಿರೋಧಿ ಸಂಘಟನೆಗಳನ್ನು ನಿಷೇಧಿಸಿದೆ.** ಹಾಕಿದ ಕೇಂದ್ರಸರ್ಕಾರದ ನಿರ್ಧಾರವನ್ನು ಸ್ವಾಗತಿಸಿ, ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರಿಗೆ ಹಾಗೂ ಕೇಂದ್ರ ಗೃಹ ಸಚಿವರಾದ ಸನ್ಮಾನ್ಯ ಶ್ರೀ ಅಮಿತ್ ಶಾ ರವರಿಗೆ ಕರ್ನಾಟಕದ ಭಾ.ಜ.ಪಾ. ತುಂಬು ಹೃದಯದಿಂದ ಅಭಿನಂದನೆಗಳನ್ನು ಹೇಳಬಯಸುತ್ತದೆ.

2014ರಲ್ಲಿ ಭಾರತವು ಆರ್ಥಿಕವಾಗಿ ಯಾವುದೇ ಸಮಯದಲ್ಲಿ ಕುಸಿಯಬಹುದಾದ ಐದು ರಾಷ್ಟ್ರಗಳಲ್ಲಿ ಒಂದಾಗಿತ್ತು. ಅಂದರೆ "ದುರ್ಬಲ ಐದ"ರ ಭಾಗವಾಗಿತ್ತು. ನಮ್ಮ ದೇಶದ ಬ್ಯಾಂಕುಗಳು (ಎನ್‌ಪಿಎ, ರಾಜಕೀಯ ಒತ್ತಡಗಳಿಂದ) ಕಾರ್ಯ ನಿರ್ವಹಿಸದ ಸ್ವತ್ತುಗಳಾಗಿ ಮಾರ್ಪಟ್ಟು ಕೆಟ್ಟ ಸಾಲಗಳಾಗಿ ಒತ್ತಡಕ್ಕೆ ಒಳಗಾಗಿದ್ದವು. ಈ ಸಂದರ್ಭದಲ್ಲಿ ಹಣದುಬ್ಬರವು ಅತ್ಯಧಿಕವಾಗಿ, ಅಂದರೆ 13%ರಷ್ಟು, 22 ತಿಂಗಳುಗಳ ಕಾಲ ಎರಡಂಕಿಯಲ್ಲಿ ಸಾಗಿತ್ತು.

ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಅಧಿಕಾರ ವಹಿಸಿಕೊಂಡ ನಂತರ ನಮ್ಮ ದೇಶವು ಆರ್ಥಿಕತೆಯನ್ನು ಸುಧಾರಿಸುವತ್ತ ಹಾಗೂ ಬಲಪಡಿಸುವತ್ತ ಗಮನಹರಿಸಿದೆ. "ಸುಲಭದ ಜೀವನ" (Ease of Living- ಬಡವರ ಕಲ್ಯಾಣ) ಮತ್ತು "ಸುಲಭದ ವ್ಯಾಪಾರ" (ಸಂಪತ್ತನ್ನು ಹೆಚ್ಚಿಸುವುದಕ್ಕೋಸ್ಕರ ವ್ಯಾಪಾರ ಮತ್ತು ವ್ಯವಹಾರಗಳಿಗೆ ಉತ್ತಮ ವಾತಾವರಣವನ್ನು ಸೃಷ್ಟಿಸುವುದತ್ತ ಕೇಂದ್ರ ಸರ್ಕಾರ ಗಮನ ಹರಿಸಿದೆ) ಬಡವರಿಗಾಗಿ ಮೂಲಭೂತ ಸೌಕರ್ಯದೊಂದಿಗೆ

ಗೌರವಯುತ ಜೀವನ ನಡೆಸಲು ತ್ವರಿತ ಹಾಗೂ ಬೃಹತ್ ಪ್ರಮಾಣದಲ್ಲಿ ಕಾರ್ಯ ಯೋಜನೆ ರೂಪಿಸಲಾಯಿತು. (12 ಕೋಟಿ ಶೌಚಾಲಯಗಳು, 44 ಕೋಟಿ ಜನ್-ಧನ್ ಖಾತೆಗಳು, 9 ಕೋಟಿ ಅಡುಗೆ ಅನಿಲ ಸಂಪರ್ಕ, 1200ಕ್ಕೂ ಹೆಚ್ಚು ಔಷಧಿಗಳೊಂದಿಗೆ 8,500 ಜನೌಷಧಿಯ ಕೇಂದ್ರಗಳು, 50 ಕೋಟಿಗೂ ಹೆಚ್ಚು ಬಡವರಿಗೆ ವರ್ಷಕ್ಕೆ 5 ಲಕ್ಷರೂಗಳ ಆಯುಷ್ಮಾನ್ ಭಾರತ್ ಆರೋಗ್ಯ ವಿಮೆಗಳಂತಹ ಕೆಲವು ಪರಿವರ್ತನಾ ಯೋಜನೆಗಳು) ಮತ್ತು ಎಲ್ಲಕ್ಕಿಂತ ಮುಖ್ಯವಾಗಿ 2 ವರ್ಷಗಳ ಕೋವಿಡ್ ಸಾಂಕ್ರಾಮಿಕ ಪಿಡುಗಿನ ನಡುವೆಯೂ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಿಂದಲೂ "ತೀವ್ರ ಬಡತನ"ದಲ್ಲಿ ಇಳಿಕೆಯಾಗಿರುವುದನ್ನು ಖಚಿತಪಡಿಸಿದೆ.

ಈ ನಿಟ್ಟಿನಲ್ಲಿ ಭಾರತೀಯ ಆರ್ಥಿಕತೆಯು ಇಂದು 100 ಯುನಿಕಾರ್ನ್ ಸ್ಟಾರ್ಟ್‌ಅಪ್‌ಗಳೊಂದಿಗೆ ಪ್ರಬಲವಾದ ಆರ್ಥಿಕತೆಯಾಗಿ ಹೊರಹೊಮ್ಮಿದ್ದು ಯುನೈಟೆಡ್ ಕಿಂಗ್‌ಡಮ್‌ನ್ನು ಹಿಂದಿಕ್ಕಿ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯ ರಾಷ್ಟ್ರವಾಗಿದೆ. 5ಜಿ ಡಿಜಿಟಲ್ ವಾಣಿಜ್ಯೋದ್ಯಮ ನೆಟ್‌ವರ್ಕ್ (ONDC) ಸೂಪರ್ ಫಾಸ್ಟ್ ವಂದೇ ಭಾರತ್ ರೈಲುಗಳ ಪ್ರಾರಂಭ, ನೂತನ ಲಾಜಿಸ್ಟಿಕ್ಸ್ ನೀತಿಯು ದೇಶದ ಆರ್ಥಿಕತೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತದೆ.

ಈ ಹಿನ್ನೆಲೆಯಲ್ಲಿ ಭಾರತವು 2022-23ರ ಆರ್ಥಿಕ ವರ್ಷದ ನಾಲ್ಕು ತಿಂಗಳಿನಲ್ಲಿ 13% ಆರ್ಥಿಕ ಬೆಳವಣಿಕೆಯ ದರದೊಂದಿಗೆ ಸತತವಾಗಿ 7 ತಿಂಗಳುಗಳ ಕಾಲ 1.4 ಲಕ್ಷ ಕೋಟಿ ರೂ ಜಿಎಸ್‌ಟಿಯನ್ನು ಸತತವಾಗಿ ಸಂಗ್ರಹಿಸುತ್ತಿದ್ದು ಇದು ಭಾರತೀಯ ಆರ್ಥಿಕತೆಯ ಶಕ್ತಿಯನ್ನು ತೋರಿಸುತ್ತದೆ. ಭಾರತವು ಇಂದು 5ನೇ ಅತಿದೊಡ್ಡ ಆರ್ಥಿಕತೆಯನ್ನು ಹೊಂದಿರುವ ರಾಷ್ಟ್ರ ಎಂಬುದು ಹೆಮ್ಮೆಯ ವಿಷಯವಾಗಿದ್ದು ಪ್ರಧಾನಿ ಶ್ರೀ ನರೆಂದ್ರ ಮೋದಿಯವರ ಸದೃಢ ಹಾಗೂ ನಿರ್ಣಾಯಕ ನಾಯಕತ್ವಕ್ಕಾಗಿ ನಾವು ಹೃತ್ಪೂರ್ವಕ ಧನ್ಯವಾದ ಹಾಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

2025-26ರ ವೇಳೆಗೆ ಭಾರತವು 5 ಟ್ರಿಲಿಯನ್ ಯುಎಸ್‌ಡಿ ಆರ್ಥಿಕತೆಯನ್ನು ತಲುಪುತ್ತದೆ ಹಾಗೂ 2030ರ ವೇಳೆಗೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನಾಯಕತ್ವದಲ್ಲಿ 'ಅಮೃತ ಕಾಲ' ಧ್ಯೇಯದೊಂದಿಗೆ 10 ಟ್ರಿಲಿಯನ್ ಯುಎಸ್‌ಡಿ ಆರ್ಥಿಕತೆಯ ಮೈಲಿಗಲ್ಲಿನೊಂದಿಗೆ ಭಾರತವು "ಅಭಿವೃದ್ಧಿ ಹೊಂದಿದ ರಾಷ್ಟ್ರ"ವಾಗಿ ಹೊರಹೊಮ್ಮಲಿದೆ.

**ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನೇತೃತ್ವದಲ್ಲಿ ರೈತ, ದಲಿತ ಹಾಗೂ ಶೋಷಿತರ ಏಳಿಗೆಗಾಗಿ ನಿರಂತರವಾಗಿ ಪ್ರಯತ್ನಿಸುತ್ತಲಿದ್ದು, ಭ್ರಷ್ಟಾಚಾರ ಮುಕ್ತ ಹಾಗೂ ಪಾರದರ್ಶಕ ಆಡಳಿತವನ್ನು ನೀಡುವಲ್ಲಿ ಶ್ರಮಿಸುತ್ತಿದೆ. ಪಿ.ಎಸ್.ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿ ಬಂದ ತಕ್ಷಣ ಸರ್ಕಾರವೇ ಸ್ವಯಂ ಪ್ರೇರಿತವಾಗಿ ತನಿಖೆಗೆ ಆದೇಶಿಸಿದೆ. ಎಡಿಜಿಪಿ ದರ್ಜೆಯ ಅಧಿಕಾರಿಯನ್ನು ದಸ್ತಗಿರಿ ಮಾಡಿ ನೈತಿಕತೆಯನ್ನು ಪ್ರದರ್ಶಿಸಿದೆ. ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲಿ ಪರಿಕ್ಷೆ ಬರೆಯದೇ ಶಿಕ್ಷಕರಾಗಿ ನೇಮಕಗೊಂಡಿದ್ದನ್ನು ಪರಿಶೀಲಿಸಿ ಈವರೆಗೆ 80 ಕ್ಕೂ ಹೆಚ್ಚು ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ. ಈ ಪ್ರಮಾಣದ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಬಹಳಷ್ಟು ಹಿಂದಿನಿಂದಲೇ ಈ ಕೃತ್ಯಗಳಲ್ಲಿ ತೊಡಗಿಕೊಂಡಿರುವುದು ಮೇಲ್ನೋಟಕ್ಕೆ ತಿಳಿದುಬಂದಿರುತ್ತದೆ. ಸಿದ್ದರಾಮಯ್ಯನವರ ಸರ್ಕಾರ ಕೊಟ್ಟ ಕುಮ್ಮಕ್ಕಿನಿಂದಲೇ ಇಂತಹ ಅಧಿಕಾರಿಗಳು ಈ ಮಟ್ಟಕ್ಕೆ ಅಕ್ರಮ ಕೈಗೊಳ್ಳಲು ಸಾಧ್ಯವಾಗಿರುತ್ತದೆ. ಇಂತಹ ಅಕ್ರಮಗಳನ್ನು ತಡೆಯುವಲ್ಲಿ ಸಂಪೂರ್ಣ ವಿಫಲವಾದ ಕಾಂಗ್ರೆಸ್ ಸರ್ಕಾರವು ಇಂದು ಬೊಬ್ಬೆ ಹಾಕುತ್ತಿರುವುದು ಹಾಸ್ಯಾಸ್ಪದವಾಗಿದ್ದು, ಬಿಜೆಪಿ ನೇತೃತ್ವದ ಸರ್ಕಾರವು ಇಂತಹ ಅಕ್ರಮಗಳನ್ನು ಸಂಪೂರ್ಣ ನಿಯಂತ್ರಿಸಲು ಬದ್ಧವಾಗಿದೆ.**

- ಕುಟೀರ ಜ್ಯೋತಿ – ಉಚಿತ ವಿದ್ಯುತ್ ಸರಬರಾಜು 75 ಯೂನಿಟ್‌ಗಳಿಗೆ ಏರಿಕೆ.
- "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ" ಯೋಜನೆಯಡಿ ರೂ. 250 ಕೋಟಿ ವೆಚ್ಚದಲ್ಲಿ 5 ಜಿಲ್ಲೆಗಳಲ್ಲಿ ತಲಾ 1,000 ಸಾಮರ್ಥ್ಯದ ವಿದ್ಯಾರ್ಥಿನಿಲಯ ಸಮುಚ್ಚಯಗಳ ನಿರ್ಮಾಣಕ್ಕೆ ಕ್ರಮ.
- 28.42ಲಕ್ಷ ರೈತರಿಗೆ ರೂ. 20,971.79 ಕೋಟಿ ಕೃಷಿ ಸಾಲ ವಿತರಣೆ.
- ಯಶಸ್ವಿನಿ ಯೋಜನೆ ಮರುಜಾರಿಗೆ ಆದೇಶ ಹೊರಡಿಸಲಾಗಿದೆ.
- ಹಾಲು ಉತ್ಪಾದಕರ ಅನುಕೂಲಕ್ಕೆ ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುವ ಯೋಜನೆ.
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ ರೂ. 6,000 ಕೋಟಿ.
- 1,240 ಉಪನ್ಯಾಸಕರು, 15,000 ಶಾಲಾ ಶಿಕ್ಷಕರ ನೇಮಕಾತಿ.
- "ನಮ್ಮ ಕ್ಲಿನಿಕ್ ಸ್ಥಾಪನೆ" 438 ನಗರ ಪ್ರದೇಶದ ಬಡ ಜನರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಾಗಿ ಸ್ಥಾಪನೆಮಾಡಿ ಜನಪರ ಯೋಜನೆಗಳನ್ನು ನೀಡುವ ಮುಖೇನ ಅಭಿವೃದ್ಧಿ ಹರಿಕಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿರವರಿಗೆ ಭಾರತೀಯ ಜನತಾಪಾರ್ಟಿಯು ರಾಜ್ಯಕಾರ್ಯಕಾರಿಣಿಯಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.
- ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವ 11,133 ಪೌರಕಾರ್ಮಿಕರನ್ನು ರಾಜ್ಯ ಸರ್ಕಾರ ಖಾಯಂ ಗೊಳಿಸಿರುವುದರಿಂದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಅಭಿನಂದನೆ ಸಲ್ಲಿಸುತ್ತದೆ.

*****